KAKB620005382022

Presented on : 30-03-2022
Registered on : 30-03-2022
Decided on : --
Duration :

**<u>ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ</u>**

**<u>ದಂಡಾಧಿಕಾರಿಗಳವರ ನ್ಯಾಯಾಲಯ, ಜೇವರ್ಗಿ.</u>**

**<u>ಉಪಸ್ಥಿತರುಃ</u>**

**ಶ್ರೀ ಕಾಶಿನಾಥ ವಿ. ಉಪ್ಪಾರ್**
ಬಿ.ಎಸ್.ಸಿ. ಎಲ್‌ಎಲ್.ಬಿ.,
ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಜೇವರ್ಗಿ

**<u>ಸಿ.ಸಿ.ನಂ.298/2022 ಮತ್ತು ವಿಭಜಿತ ಪ್ರಕರಣ ಸಂ.947/2025</u>**

**<u>ದಿನಾಂಕಃ 03ನೇ ಆಗಸ್ಟ- 2026 ರಂದು</u>**

**<u>ಫಿರ್ಯಾದಿದಾರರುಃ</u>**

ಕರ್ನಾಟಕ ರಾಜ್ಯ ಯಡ್ರಾಮಿ ಪೊಲೀಸರಿಂದ)

**(ಸಹಾಯಕ ಸರ್ಕಾರಿ ಅಭಿಯೋಜಕರು)**

**- ವಿರುದ್ದ -**

**<u>ಆರೋಪಿತರುಃ</u>** 1. ಶಾಂತಗೌಡ ತಂದೆ ಮಡಿವಾಳಪ್ಪಗೌಡ ಪೊಲೀಸ ಪಾಟೀಲ
ವಃ 45 ವರ್ಷ, ಉಃ ಒಕ್ಕಲುತನ, ಸಾಃ ನೇರಡಗಿ,

2. ಅಯ್ಯಣ್ಣಗೌಡ ತಂದೆ ಶಾಂತಗೌಡ ಪೊಲೀಸ ಪಾಟೀಲ
ವಃ 23 ವರ್ಷ, ಉಃ ಒಕ್ಕಲುತನ, ಸಾಃ ನೇರಡಗಿ,

**(ಆ-2 ಅವರ ವಿರುದ್ದ ಪ್ರಕರಣ ವಿಭಜಿತಗೊಳಿಸಲಾಗಿದೆ)**

**(ಆರೋಪಿತರ ಪರ ಶ್ರೀ ಜೆ. ವಿ. ಹೆಚ್, ವಕೀಲರು)**

KAKB620005382022

1. ಪ್ರಕರಣ ನಡೆದ ದಿನಾಂಕ : 07-01-2022
2. ಪ್ರಕರಣ ದಾಖಲಾದ ದಿನಾಂಕ : 07-01-2022
3. ಆರೋಪಿತರನ್ನು ಬಂಧಿಸಿದ ದಿನಾಂಕ: --
4. ಫಿರ್ಯಾದಿದಾರರ ಹೆಸರು : ಅನಸೂಯಾ ಪೊಲೀಸ ಪಾಟೀಲ
5. ಸಾಕ್ಷಿಗಳ ವಿಚಾರಣೆ ಪ್ರಾರಂಭದ ದಿನಾಂಕಃ 28-07-2026
6. ಸಾಕ್ಷಿಗಳ ವಿಚಾರಣೆ ಮುಕ್ತಾಯದ ದಿನಾಂಕಃ 28-07-2026
7. ಅಪಾದನೆಗಳು : ಭಾ.ದಂ.ಸಂ.ಕಲಂ 447, 341, 323, 355, 354, 504, 506 ಸಹ ವಾಚಕ ಕಲಂ 34 ರಡಿಯಲ್ಲಿ.
8. ನ್ಯಾಯಾಧೀಶರ ತೀರ್ಮಾನ : ಅಂತಿಮ ಆದೇಶದಂತೆ

ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂಡಾಧಿಕಾರಿಗಳು,
ಜೇವರ್ಗಿ.

**ತೀರ್ಪು**

ಯಡ್ರಾಮಿ ಪೊಲೀಸ್ ಠಾಣೆ, ಯಡ್ರಾಮಿ ಇವರು ಆರೋಪಿತರ ವಿರುದ್ದ ಭಾರತೀಯ ದಂಡ ಸಂಹಿತೆ ಕಲಂ 447, 341, 323, 355, 354, 504, 506 ಸಹ ವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪಾದನೆಗಳಿಗಾಗಿ ದೋಷಾರೋಪಣೆ ಪತ್ರವನ್ನು ಸಲ್ಲಿಸಿರುತ್ತಾರೆ.

2. **ಅಭಿಯೋಜನೆಯ ಮೊಕದ್ದಮ್ಮೆಯ ಸಂಕ್ಷಿಪ್ತ ವಿವರಣೆಃ-**

ದಿನಾಂಕ 07-01-2022 ರಂದು ಮದ್ಯಾಹ್ನ 01-00 ಗಂಟೆ ಸುಮಾರಿಗೆ ಯಡ್ರಾಮಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ನೇರಡಗಿ ಗ್ರಾಮದ

ಸೀಮಾಂತರದ ಹೊಲ ಸರ್ವೆ ನಂ.51 ರಲ್ಲಿ ಆರೋಪಿತರು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಆರೋಪಿತರು ಸಾಕ್ಷಿ ನಂ.1 ಮತ್ತು ಚಾಸಾ-4 ಅವರಿಗೆ ಕಾನೂನು ಬಾಹಿರವಾಗಿ ಅಕ್ರಮ ತಡೆಯುಂಟು ಪಡಿಸಿ, ಫಿರ್ಯಾದಿದಾರರ ಹೊಲ ಸರ್ವೆ ನಂ.51 ರಲ್ಲಿ ಹಾಕಿರುವ ಪೈಪನ್ನು ಒಡೆದು ಹಾಕಿ ಲುಕ್ಸಾನ ಪಡಿಸಿದ್ದು, ಫಿರ್ಯಾದಿದಾರರಿಗೆ ಮತ್ತು ಚಾಸಾ-4 ಅವರಿಗೆ ವಿನಾಕಾರಣ ಜಗಳ ತೆಗೆದು ಅವಾಚ್ಯ ಶಬ್ದಗಳಿಂದ ಬೈಯ್ದು, ಸಾರ್ವಜನಿಕವಾಗಿ ಅವಮಾನ ಪಡಿಸಿದ್ದಲ್ಲದೆ, 2ನೇ ಆರೋಪಿತನು ಸಾಕ್ಷಿ ನಂ.4 ಅವರಿಗೆ ಕೈಯಿಂದ ಬಲಗೈ ರಟ್ಟೆಗೆ, ಬೆನ್ನಿಗೆ ಕೈಯಿಂದ ಹೊಡೆದು ಗುಪ್ತಗಾಯ ಪಡಿಸಿದ್ದು, 1ನೇ ಆರೋಪಿತನು ಸಾಕ್ಷಿ ನಂ.1 ಅವರಿಗೆ ಬಲಗಾಲ ಚಪ್ಪಲಿಯಿಂದ ಫಿರ್ಯಾದಿದಾರರ ಎಡ ಕಪಾಳಕ್ಕೆ ಹೊಡೆದು ಗುಪ್ತಗಾಯ ಪಡಿಸಿದ್ದಲ್ಲದೆ, 1ನೇ ಆರೋಪಿತನು ಸಾಕ್ಷಿ ನಂ.1 ಅವರಿಗೆ ಮಾನಭಂಗ ಪಡಿಸಿದ್ದಲ್ಲದೆ, ಜೀವ ಸಹಿತ ಬಿಡುವುದಿಲ್ಲ ಖಲಾಸ ಮಾಡುತ್ತೇವೆಂದು ಜೀವದ ಬೇದರಿಕೆ ಹಾಕಿರುತ್ತಾರೆಂದು ಆರೋಪಿತರ ವಿರುದ್ದ ಫಿರ್ಯಾದಿಯನ್ನು ನೀಡಿರುತ್ತಾರೆ.

3. ಸದರಿ ಫಿರ್ಯಾದಿಯ ಆಧಾರದ ಮೇಲೆ ನೆಲೋಗಿ ಪೊಲೀಸರು ತಮ್ಮ ಠಾಣಾ ಗುನ್ನಾ ನಂ.5/2022 ರಲ್ಲಿ ಪ್ರಕರಣವನ್ನು ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ತನಿಖೆ ಪೂರ್ಣಗೊಂಡ ನಂತರ ಆರೋಪಿತರ ವಿರುದ್ದ ಭಾರತೀಯ ದಂಡ ಸಂಹಿತೆ ಕಲಂ 447, 341, 323, 355, 354, 504, 506 ಸಹ ವಾಚಕ ಕಲಂ 34 ರಡಿಯಲ್ಲಿನ ಶಿಕ್ಷಾರ್ಹ ಅಪರಾಧಗಳಿಗಾಗಿ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತಾರೆ.

4. ದೋಷಾರೋಪಣೆ ಸಲ್ಲಿಸಿದ ನಂತರ ಪ್ರಕರಣದ ಸಂಜ್ಞೆಯನ್ನು ತೆಗೆದುಕೊಂಡು ಆರೋಪಿತರ ವಿರುದ್ದ ಸಮನ್ಸ ಜಾರಿ ಮಾಡಿ, ಆರೋಪಿತರ ಹಾಜರಾತಿಯನ್ನು ಪಡೆಯಲಾಯಿತು. ನಂತರ ದಂಡ ಪ್ರಕ್ರಿಯಾ ಸಂಹಿತೆ ಕಲಂ 207 ರ ಪ್ರಕಾರ ದೋಷಾರೋಪಣೆ ಪತ್ರದ ನಕಲು ಪ್ರತಿಯನ್ನು ಆರೋಪಿತರಿಗೆ ನೀಡಿ, ದೋಷಾರೋಪಣೆಯನ್ನು ರಚಿಸುವ ಮುನ್ನ ವಾದ ವಿವಾದವನ್ನು ಆಲಿಸಲಾಯಿತು. ನಂತರ ಭಾರತೀಯ ದಂಡ ಸಂಹಿತೆ ಕಲಂ 447, 341, 323, 355, 354, 504, 506 ಸಹ ವಾಚಕ ಕಲಂ 34 ರಡಿಯಲ್ಲಿ ದೋಷಾರೋಪಣೆಯನ್ನು ರಚಿಸಿ ಆರೋಪಿತರಿಗೆ ಓದಿ ಹೇಳಲಾಗಿ, ಸದರಿ ದೋಷಾರೋಪಣೆಯ ಆರೋಪಗಳನ್ನು ಒಪ್ಪಿಕೊಂಡಿರುವುದಿಲ್ಲ ಮತ್ತು ವಿಚಾರಣೆ ನಡೆಯಬೇಕೆಂದು ಕೇಳಿಕೊಂಡಿರುತ್ತಾರೆ.

5. ಅಭಿಯೋಜನೆಯು ಆರೋಪಿತರ ವಿರುದ್ದ ಅಪಾದಿಸಿದ ಮೇಲಿನ ಅಪರಾಧಗಳನ್ನು ಸಾಬೀತು ಪಡಿಸಲು ಪ್ರಾಸಾ-1 ಮತ್ತು 2 ಜನರ ಸಾಕ್ಷಿಗಳ ವಿಚಾರಣೆ ಮಾಡಿಸಿದ್ದು, ನಿಶಾನೆ ಪಿ-1 ಮತ್ತು ನಿಪಿ-2 ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ. ಉಳಿದ ಸಾಕ್ಷಿದಾರರ ಸಾಕ್ಷ್ಯವನ್ನು ಕೈಬಿಡಲಾಗಿದೆ. ಅಭಿಯೋಜಕರು ಇನ್ನುಳಿದ ಸಾಕ್ಷ್ಯಗಳ ವಿಚಾರಣೆ ಮಾಡಬೇಕೆಂದು ಕೋರಿರುತ್ತಾರೆ. ಆದರೆ ಪಿ.ಡಬ್ಲ್ಯೂ-1 ಮತ್ತು 2 ರವರು ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುವುದರಿಂದ, ಅಭಿಯೋಜಕರವರ ವಿನಂತಿಯನ್ನು ತಳ್ಳಿಹಾಕಿ, ಅಭಿಯೋಜನೆಯ ಪರ ಸಾಕ್ಷ್ಯ ವಿಚಾರಣೆಯನ್ನು ಮುಕ್ತಾಯಗೊಳಿಸಲಾಗಿರುತ್ತದೆ.

6. ಉಭಯ ಪಕ್ಷಗಾರರ ವಾದ ವಿವಾದವನ್ನು ಆಲಿಸಲಾಯಿತು.

KAKB620005382022

7. ಈ ಕೆಳಕಂಡ ಅಂಶಗಳು ನ್ಯಾಯಾಲಯದ ಪರಿಗಣನೆಗೆ ಬಂದಿರುತ್ತವೆ.

**ಅಂಶಗಳು**

1. ದಿನಾಂಕ 07-01-2022 ರಂದು ಮದ್ಯಾಹ್ನ 01-00 ಗಂಟೆ ಸುಮಾರಿಗೆ ಯಡ್ರಾಮಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ನೇರಡಗಿ ಗ್ರಾಮದ ಸೀಮಾಂತರದ ಹೊಲ ಸರ್ವೆ ನಂ.51 ರಲ್ಲಿ ಆರೋಪಿತರು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಆರೋಪಿತರು ಸಾಕ್ಷಿ ನಂ.1 ಮತ್ತು ಚಾಸಾ-4 ಅವರಿಗೆ ಕಾನೂನು ಬಾಹಿರವಾಗಿ ಅಕ್ರಮ ತಡೆಯುಂಟು ಪಡಿಸಿ, ಆ ಮೂಲಕಭಾ.ದಂ.ಸಂ.341 ಸಹ ವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂಬುದನ್ನು ಅಭಿಯೋಜನೆಯು ಸಂಶಯಾತೀತವಾಗಿ ಸಾಭೀತು ಪಡಿಸುತ್ತದೆಯೇ?

2. ಮೇಲೆ ಹೇಳಲಾದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, 1ನೇ ಆರೋಪಿತನು 2ನೇ ಆರೋಪಿತನೊಂದಿಗೆ ಕೂಡಿಕೊಂಡು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಫಿರ್ಯಾದಿದಾರರ ಹೊಲ ಸರ್ವೆ ನಂ.51 ರಲ್ಲಿ ಹಾಕಿರುವ ಪೈಪನ್ನು ಒಡೆದು ಹಾಕಿ ಲುಕ್ಸಾನ ಪಡಿಸಿರುತ್ತಾರೆಂದು, ಆ ಮೂಲಕ ಭಾ.ದಂ.ಸಂ.447 ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂಬುದನ್ನು ಅಭಿಯೋಜನೆಯು ಸಂಶಯಾತೀತವಾಗಿ ಸಾಭೀತು ಪಡಿಸುತ್ತದೆಯೇ?

3. ಮೇಲೆ ಹೇಳಲಾದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತರು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಫಿರ್ಯಾದಿದಾರರಿಗೆ ಮತ್ತು ಚಾಸಾ-4 ಅವರಿಗೆ ವಿನಾಕಾರಣ ಜಗಳ ತೆಗೆದು ಅವಾಚ್ಯ ಶಬ್ದಗಳಿಂದ ಬೈಯ್ದು, ಸಾರ್ವಜನಿಕವಾಗಿ ಅವಮಾನ ಪಡಿಸಿರುತ್ತಾರೆಂದು, ಆ ಮೂಲಕ ಭಾ.ದಂ.ಸಂ.504 ಸಹ ವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂಬುದನ್ನು ಅಭಿಯೋಜನೆಯು ಸಂಶಯಾತೀತವಾಗಿ ಸಾಭೀತು ಪಡಿಸುತ್ತದೆಯೇ?

4. ಮೇಲೆ ಹೇಳಲಾದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತರು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಫಿರ್ಯಾದಿದಾರರಿಗೆ ವಿನಾಕಾರಣ ಜಗಳ ತೆಗೆದು ಅವಾಚ್ಯ ಶಬ್ದಗಳಿಂದ ಬೈದಿದ್ದಲ್ಲದೆ 2ನೇ ಆರೋಪಿತನು ಸಾಕ್ಷಿ ನಂ.4 ಅವರಿಗೆ ಕೈಯಿಂದ ಬಲಗೈ ರಟ್ಟೆಗೆ, ಬೆನ್ನಿಗೆ ಕೈಯಿಂದ ಹೊಡೆದು ಗುಪ್ತಗಾಯ ಪಡಿಸಿ, ಭಾ.ದಂ.ಸಂ. 323 ಸಹ ವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂಬುದನ್ನು ಅಭಿಯೋಜನೆಯು ಸಂಶಯಾತೀತವಾಗಿ ಸಾಭೀತು ಪಡಿಸುತ್ತದೆಯೇ?

5. ಮೇಲೆ ಹೇಳಲಾದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತರು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಫಿರ್ಯಾದಿದಾರರಿಗೆ ಮತ್ತು ಚಾಸಾ-4 ವಿನಾಕಾರಣ ಜಗಳ ತೆಗೆದು ಅವಾಚ್ಯ ಶಬ್ದಗಳಿಂದ ಬೈದಿದ್ದಲ್ಲದೆ 1ನೇ

KAKB620005382022

ಆರೋಪಿತನು ಸಾಕ್ಷಿ ನಂ.1 ಅವರಿಗೆ ಬಲಗಾಲ ಚಪ್ಪಲಿಯಿಂದ ಫಿರ್ಯಾದಿದಾರರ ಎಡ ಕಪಾಳಕ್ಕೆ ಹೊಡೆದು ಗುಪ್ತಗಾಯ ಪಡಿಸಿ, ಆ ಮೂಲಕ ಆರೋಪಿತು ಭಾ.ದಂ.ಸಂ. 355 ಸಹ ವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂಬುದನ್ನು ಅಭಿಯೋಜನೆಯು ಸಂಶಯಾತೀತವಾಗಿ ಸಾಭೀತುಪಡಿಸುತ್ತದೆಯೇ?

6. ಮೇಲೆ ಹೇಳಲಾದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತರು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಫಿರ್ಯಾದಿದಾರರಿಗೆ ವಿನಾಕಾರಣ ಜಗಳ ತೆಗೆದು ಅವಾಚ್ಯ ಶಬ್ದಗಳಿಂದ ಬೈದು ಹೊಡಿಬಡಿ ಮಾಡಿದ್ದಲ್ಲದೆ 1ನೇ ಆರೋಪಿತನು ಸಾಕ್ಷಿ ನಂ.1 ಅವರಿಗೆ ಮಾನಭಂಗ ಪಡಿಸಿ, ಆ ಮೂಲಕ ಭಾ.ದಂ.ಸಂ. 354 ಸಹ ವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂಬುದನ್ನು ಅಭಿಯೋಜನೆಯು ಸಂಶಯಾತೀತವಾಗಿ ಸಾಭೀತು ಪಡಿಸುತ್ತದೆಯೇ?

7. ಮೇಲೆ ಹೇಳಲಾದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತರು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಫಿರ್ಯಾದಿದಾರರಿಗೆ ವಿನಾಕಾರಣ ಜಗಳ ತೆಗೆದು ಅವಾಚ್ಯ ಶಬ್ದಗಳಿಂದ ಬೈದು ಹೊಡಿಬಡಿ ಮಾಡಿದ್ದಲ್ಲದೆ ಜೀವ ಸಹಿತ ಬಿಡುವುದಿಲ್ಲ ಖಲಾಸ ಮಾಡುತ್ತೇವೆಂದು ಜೀವದ ಬೇದರಿಕೆ ಹಾಕಿದ್ದು, ಆ ಮೂಲಕ ಭಾ.ದಂ.ಸಂ. 506 ಸಹ ವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂಬುದನ್ನು

ಅಭಿಯೋಜನೆಯು ಸಂಶಯಾತೀತವಾಗಿ ಸಾಭೀತು ಪಡಿಸುತ್ತದೆಯೇ?

8. ಯಾವ ಆದೇಶ ಅಥವಾ ಶಿಕ್ಷೆ?

8. ಮೇಲ್ಕಾಣಿಸಿದ ಅಂಶಗಳಿಗೆ ನನ್ನ ಉತ್ತರಗಳು ಈ ಕೆಳಗಿನಂತಿವೇಃ

ಅಂಶ ನಂ.1 ರಿಂದ 7: ನಕರಾತ್ಮಕವಾಗಿ.

ಅಂಶ ನಂ.8 : ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ

**ಕಾ ರ ಣ ಗ ಳು**

9. **ಅಂಶ ನಂ.1 ರಿಂದ 7:-** ಸದರಿ ಅಂಶಗಳು ಒಂದಕ್ಕೊಂದು ಅಂತರ್ಗತವಾಗಿರುವುದರಿಂದ, ಚರ್ಚೆಯ ಪುನರಾವರ್ತನೆಯನ್ನು ತಪ್ಪಿಸುವ ಸಲುವಾಗಿ ಸದರಿ ಅಂಶಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

10. ಈ ಪ್ರಕರಣದಲ್ಲಿ ಅಭಿಯೋಜನೆಯು ಆರೋಪಿತರ ಮೇಲೆ ಅಪಾದಿಸಿದ ಆರೋಪವನ್ನು ಸಾಬೀತು ಪಡಿಸಲು ಫಿರ್ಯಾದಿ ಚಾಸಾ-1 ಅನುಸೂಯಾ ಇವರನ್ನು ಪಿಡಬ್ಲ್ಯೂ-1 ಎಂದು ಸಾಕ್ಷ್ಯ ಮಾಡಿಸಿದ್ದು, ಪಿಡಬ್ಲ್ಯೂ-1 ರವರು ತಮ್ಮ ಸಾಕ್ಷ್ಯದಲ್ಲಿ, ತನ್ನ ಮತ್ತು ಆರೋಪಿತರ ನಡುವೆ ಯಾವುದೇ ಜಗಳ ಆಗಿರುವುದಿಲ್ಲ, ಆರೂಪಿತರು ಅಕ್ರಮಕೂಟ ಕಟ್ಟಿಕೊಂಡು ಬಂದು ತಡೆದು ನಿಲ್ಲಿಸಿರುವುದಿಲ್ಲ, ಅವಾಚ್ಯ ಶಬ್ದಗಳಿಂದ ಬೈದಿಲ್ಲ, ಹಲ್ಲೆ ಮಾಡಿಲ್ಲ, ಅಕ್ರಮ ಪ್ರವೇಶ ಮಾಡಿಲ್ಲ ಅವಮಾನ ಮಾಡಿಲ್ಲ, ಮತ್ತು ಜೀವ ಬೆದರಿಕೆ ಹಾಕಿಲ್ಲ, ತಾನು ಪೊಲೀಸರಿಗೆ ಯಾವುದೇ ದೂರು ನೀಡಿರುವುದಿಲ್ಲವೆಂದು ಹಾಗೂ ತನ್ನ ಮತ್ತು ಆರೋಪಿತರ ನಡುವೆ ಬಾಯಿ ಮಾತಿನ ಜಗಳ ಆಗಿದ್ದು ತಾನು ಪೊಲೀಸ ಠಾಣೆಗೆ ಹೋದಾಗ, ಪೊಲೀಸರು ಒಂದು ದಾಖಲೆ ಮೇಲೆ ತನ್ನ ಸಹಿ ಪಡೆದುಕೊಂಡಿರುತ್ತಾರೆಂದು ನಿಶಾನೆ ಪಿ-1 ರ ದೂರಿನಲ್ಲಿ ಏನು ಬರದಿದೆ ಎಂದು ತನಗೆ ಗೊತ್ತಿಲ್ಲವೆಂದು ಹಾಗೂ ಪೊಲೀಸರು ಸಹಿ ಮಾಡಲು ಹೇಳಿದ್ದರಿಂದ ತಾನು

ಸಹಿ ಮಾಡಿರುತ್ತೇನೆಂದು ಅಭಿಯೋಜನೆಗೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುತ್ತಾರೆ.

11. ಈ ಪ್ರಕರಣದಲ್ಲಿ ಅಭಿಯೋಜನೆಯು ಆರೋಪಿತರ ಮೇಲೆ ಅಪಾದಿಸಿದ ಆರೋಪವನ್ನು ಸಾಬೀತು ಪಡಿಸಲು ಚಾಸಾ-4 ಈರಣ್ಣಗೌಡ, ಇವರನ್ನು ಪಿ.ಡಬ್ಲ್ಯೂ-2 ಎಂದು ಸಾಕ್ಷ್ಯ ಮಾಡಿಸಿದ್ದು, ಪಿಡಬ್ಲ್ಯೂ-2 ರವರು ಈ ಪ್ರಕರಣದ ಗಾಯಾಳು ಸಾಕ್ಷಿದಾರರಾಗಿದ್ದು, ಇವರು ತಮ್ಮ ಸಾಕ್ಷ್ಯದಲ್ಲಿ, ಈ ಪ್ರಕರಣದ ಬಗ್ಗೆ ತನಗೆ ಯಾವುದೇ ಮಾಹಿತಿ ಇಲ್ಲ, ತಾನು ಪೊಲೀಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲವೆಂದು ಅಭಿಯೋಜನೆಗೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುತ್ತಾರೆ.

12. ಸದರಿ ಪಿಡಬ್ಲ್ಯೂ-1 ಮತ್ತು 2 ರವರನ್ನು ಮಾನ್ಯ ಸ.ಸ.ಅ ರವರು ಪ್ರತಿಕೂಲ ಸಾಕ್ಷ್ಯವೆಂದು ಪರಿಗಣಿಸಿ ಪಾಟೀ ಸವಾಲು ಮಾಡಿದ್ದು, ಆದರೆ ಪಿಡಬ್ಲು-1 ಮತ್ತು 2 ರವರ ಕಡೆಯಿಂದ ಅಭಿಯೋಜನೆಗೆ ಪೂರಕವಾಗುವಂತೆ ಆರೋಪಿತರ ವಿರುದ್ದ ಆಪಾದಿಸಿದ ದೋಷಾರೋಪಣೆಗೆ ಪೂರಕವಾಗಿ ಯಾವುದೇ ಅಂಶಗಳನ್ನು ಪಡೆದಿರುವುದಿಲ್ಲ. ಪಿಡಬ್ಲು--1 ರವರು ಈ ಪ್ರಕರಣದ ಫಿರ್ಯಾದಿದಾರರು ಮತ್ತು ನೊಂದ ವ್ಯಕ್ತಿಯಾಗಿದ್ದು, ಪಿಡಬ್ಲು-2 ಮತ್ತು ಪಿಡಬ್ಲು-2 ಇವರು ಸಹ ಈ ಪ್ರಕರಣದ ಗಾಯಾಳು ಸಾಕ್ಷಿದಾರರಾಗಿದ್ದು, ಇವರು ಅಭಿಯೋಜನೆಗೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುತ್ತಾರೆ. ಪಿಡಬ್ಲು-1 ಮತ್ತು 2 ರವರು ಅಭಿಯೋಜನೆಗೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿದ್ದರಿಂದ ಮಾನ್ಯ ಸ.ಸ.ಅ ರವರು ಇತರೇ ಸಾಕ್ಷಿಗಳಿಗೆ ಸಾಕ್ಷ್ಯದ ಸಮನ್ಸಗಳನ್ನು ಹೊರಡಿಸುವಂತೆ ಮಾಡಿದ ಮನವಿಯನ್ನು ತಿರಸ್ಕರಿಸಲಾಗಿದೆ. ಆದಾಗ್ಯೂ ಒಂದು ವೇಳೆ ಇತರೆ

ಚಾಸಾ ಸಾಕ್ಷಿದಾರರಿಗೆ ಸಮನ್ಸನ್ನು ಜಾರಿ ಮಾಡಿದ್ದರೂ ಸಹ, ಪಿಡಬ್ಲು-1 ಮತ್ತು 2 ರವರು ಅಭಿಯೋಜನೆಗೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿದ್ದರಿಂದ ಅಭಿಯೋಜನೆಯ ಪ್ರಕರಣವನ್ನು ಸಾಭೀತು ಪಡಿಸಲು ಅನುಕೂಲವಾಗಿರುವುದಿಲ್ಲ. ಅಲ್ಲದೆ ಸದರಿ ಸಾಕ್ಷಿದಾರರಿಗೆ ಸಮನ್ಸನ್ನು ನೀಡುವುದರಿಂದ ನ್ಯಾಯಾಲಯದ ಮತ್ತು ಇತರೇ ಸಾಕ್ಷಿದಾರರ ಅಮೂಲ್ಯ ಸಮಯ ಹಾಳಾಗುವುದೇ ಹೊರತು ಅಭಿಯೋಜನೆಗೆ ಯಾವುದೇ ರೀತಿಯ ಅನುಕೂಲವಾಗಿರುವುದಿಲ್ಲ. ಅಲ್ಲದೆ ಸರ್ಕಾರಿ ಹೊರೆಯು ಸಹ ಆಗುವುದರಿಂದ ಸದರಿ ಮಾನ್ಯ ಸ.ಸ.ಅ ರವರ ಮನವಿಯನ್ನು ತಿರಸ್ಕರಿಸಿದ್ದು ಇರುತ್ತದೆ.

13. ಪಿಡಬ್ಲು-1 ಮತ್ತು 2 ರವರು ಪ್ರತಿಕೂಲ ಸಾಕ್ಷ್ಯ ನುಡಿದಿದ್ದರಿಂದ ಅಭಿಯೋಜನೆಯ ಪ್ರಕರಣವು ಸಂಶಯಾತಿತವಾಗಿ ಇರುವುದಿಲ್ಲ ಮತ್ತು ಅಭಿಯೋಜನೆಯು ಆರೋಪಿತರ ಅಪರಾಧಗಳನ್ನು ಸಂಶಯಾತೀತವಾಗಿ ರುಜುವಾತು ಪಡಿಸಲು ವಿಫಲವಾಗಿರುತ್ತದೆ ಎಂದು ಹೇಳಬಹುದು. ಆದ್ದರಿಂದ ಕಾನೂನಿನ ನಿರ್ಧರಿತ ತತ್ವಗಳಂತೆ ಅಭಿಯೋಜನೆಯ ಪ್ರಕರಣದಲ್ಲಿ ಸಂಶಯವಿದ್ದಲ್ಲಿ, ಸದರಿ ಸಂಶಯದ ಲಾಭವನ್ನು ಆರೋಪಿತರಿಗೆ ಸಲ್ಲತಕ್ಕದ್ದು. ಸದರಿ ಪ್ರಕರಣದ ವಸ್ತುಸ್ಥಿತಿಯನ್ನು ಪರಿಶೀಲಿಸಿದಾಗ, ಅಭಿಯೋಜನೆಯು ಆರೋಪಿತರು ಭಾ.ದಂ.ಸಂಹಿತೆ ಕಲಂ 447, 341, 323, 355, 354, 504, 506 ಸಹ ವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತಾರೆಂಬುದನ್ನು ಸಂಶಯಾತೀತವಾಗಿ ಸಾಭೀತು ಪಡಿಸುವಲ್ಲಿ ವಿಫಲವಾಗಿರುತ್ತದೆ. ಕಾರಣ ಅಂಶ ನಂ.1 ರಿಂದ 7 ನೇದ್ದವುಗಳನ್ನು ನಕರಾತ್ಮಕವಾಗಿ ಉತ್ತರಿಸಲಾಗಿದೆ.

KAKB620005382022

14. **<u>ಅಂಶ ನಂ.8</u>:-** ಅಂಶ ನಂ.1 ರಿಂದ 7 ನೇದ್ದವುಗಳನ್ನು ನಕರಾತ್ಮಕವಾಗಿ ಉತ್ತರಿಸಿರುವುದರಿಂದ, ಈ ಕೆಳಗಿನಂತೆ ಅಂತಿಮವಾಗಿ ಆದೇಶಿಸಿರುತ್ತೆನೆ.

**<u>ಆ ದೇ ಶ</u>**

ದಂಡ ಪ್ರಕ್ರಿಯಾ ಸಂಹಿತೆ ಕಲಂ 248 (1) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ, ಆರೋಪಿತರನ್ನು ಭಾರತೀಯ ದಂಡ ಸಂಹಿತೆ ಕಲಂ 447, 341, 323, 355, 354, 504, 506 ಸಹ ವಾಚಕ ಕಲಂ 34 ರಡಿಯಲ್ಲಿನ ಶಿಕ್ಷಾರ್ಹ ಅಪರಾಧಗಳಿಗೆ ನಿರ್ದೋಷಿಗಳೆಂದು ತೀರ್ಮಾನಿಸಿ ಬಿಡುಗಡೆ ಮಾಡಲಾಗಿದೆ.

ಆರೋಪಿತರ ಮತ್ತು ಅವರ ಜಾಮೀನುದಾರರು ಬರೆದುಕೊಟ್ಟ ಜಾಮೀನು ಭದ್ರತೆಗಳನ್ನು 6 ತಿಂಗಳವರೆಗೆ ವಿಸ್ತರಿಸಲಾಗಿದೆ.

ಈ ಪ್ರಕರಣದಲ್ಲಿ ಜಪ್ತಿಪಡಿಸಿಕೊಂಡ ಒಂದು ಬಲಗಾಲಿನ ಚಪ್ಪಲಿ ಮೌಲ್ಯರಹಿತವಾಗಿರುವುದರಿಂದ ಅದನ್ನು ಮೇಲ್ಮನವಿ ಅವಧಿ ಮುಗಿದ ನಂತರ ನಾಶಪಡಿಸಲು ಈ ಮೂಲಕ ಆದೇಶಿಸಲಾಗಿದೆ.

(ಶೀಘ್ರಲಿಪಿಗಾರರು ನನ್ನ ಉಕ್ತಲೇಖನಕ್ಕೆ ನೇರವಾಗಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿದ್ದು, ಸೂಕ್ತ ತಿದ್ದುಪಡಿಗಳನ್ನು ಮಾಡಿದ ನಂತರ ತೆರೆದ ನ್ಯಾಯಾಲಯದಲ್ಲಿ ಇಂದು ದಿನಾಂಕ 3ನೇ ಆಗಸ್ಟ -2026 ರಂದು ತೀರ್ಪನ್ನು ಘೋಷಿಸಲಾಯಿತು)

**(ಶ್ರೀ ಕಾಶಿನಾಥ ವಿ. ಉಪ್ಪಾರ್)**
ಸಿವಿಲ್ ನ್ಯಾಯಾಧೀಶರು
ಹಾಗೂ ಪ್ರ.ದ.ನ್ಯಾ.ದಂಡಾಧಿಕಾರಿಗಳು, ಜೇವರ್ಗಿ.

KAKB620005382022

**<u>ಅನುಬಂಧ</u>**

**<u>ಅಭಿಯೋಜನೆಯ ಪರವಾಗಿ ಗುರ್ತಿಸಲ್ಪಟ್ಟಿರುವ ಸಾಕ್ಷಿದಾರರ ಪಟ್ಟಿ</u>**

ಪಿ.ಡಬ್ಲ್ಯೂ-1 : ಅನುಸೂಯಾ ಗಂಡ ಈರಣ್ಣಗೌಡ

ಪಿ.ಡಬ್ಲ್ಯೂ-2 : ಈರಣ್ಣಗೌಡ ತಂದೆ ಬಸನಗೌಡ

**<u>ಅಭಿಯೋಜನೆಯ ಪರವಾಗಿ ಗುರ್ತಿಸಲ್ಪಟ್ಟಿರುವ ದಸ್ತಾವೇಜುಗಳ ಪಟ್ಟಿ</u>**

ನಿ.ಪಿ.1 : ದೂರು

ನಿ.ಪಿ.2 : ಪ್ರಾಸಾ-1 ರವರ ಸಹಿ

ನಿ.ಪಿ.3 : ಪ್ರಾಸಾ-2 ರವರ ಹೇಳಿಕೆ

**<u>ಆರೋಪಿತರ ಪರವಾಗಿ ಗುರ್ತಿಸಲ್ಪಟ್ಟಿರುವ ಸಾಕ್ಷಿದಾರರ ಪಟ್ಟಿ</u>**

- ಇಲ್ಲ -

**<u>ಆರೋಪಿತರ ಪರವಾಗಿ ಗುರ್ತಿಸಲ್ಪಟ್ಟಿರುವ ದಸ್ತಾವೇಜುಗಳ ಪಟ್ಟಿ</u>**

- ಇಲ್ಲ -

**<u>ಅಭಿಯೋಜನೆ ಪರವಾಗಿ ಗುರ್ತಿಸಲಾದ ಮುದ್ದೆಮಾಲುಗಳ ವಿವರ</u>**

- ಇಲ್ಲ -

ಸಿವಿಲ್ ನ್ಯಾಯಾಧೀಶರು
ಹಾಗೂ ಪ್ರ.ದ.ನ್ಯಾ.ದಂಡಾಧಿಕಾರಿಗಳು,
ಜೇವರ್ಗಿ.

Dictated on : 03-08-2026
Transcribed on : 03-08-2026
checked on : 03-08-2026
Signed on : 03-08-2026

KASHINATH VASANT UPPAR

Digitally signed by KASHINATH VASANT UPPAR
Date: 2026.08.03 11:50:35 +0530

(**Kashinath V. Uppar**)
**CIVIL JUDGE JMFC, Jewargi.**

Visit **ecourts.gov.in** for updates or download mobile app "**eCourts Services**" from Android or iOS